# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 94 |
| 2. | ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | 07/12/2020 |
| 4. | ಉತ್ತರಿಸುವವರು | ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಆದಾಯ ತೆರಿಗೆ ಕಾಯ್ದೆಯ ಕಲಂ 12ರ ಅನ್ವಯ ದತ್ತಿ ಸಂಸ್ಥೆ ಎಂದು ನೋಂದಣಿ ಮಾಡಿದ ಬಳಿಕ ದತ್ತಿ ಸಂಸ್ಥೆಯು ಆದಾಯ ತೆರಿಗೆ ವಿನಾಯಿತಿ ಕೋರಿ ಮನವಿ ಸಲ್ಲಿಸದಿರಲು ಕಾರಣವೇನು ? | ಈ ಹಿಂದೆ ಮಂಡಳಿಯು ಆದಾಯ ತೆರಿಗೆ ಕಾಯ್ದೆ ಕಲಂ 10(46) ಅಡಿಯಲ್ಲಿ ತೆರಿಗೆ ವಿನಾಯಿತಿ ಕೋರಿ ಮನವಿ ಸಲ್ಲಿಸಿರುವುದಿಲ್ಲ. ತದ ನಂತರ ದಿನಾಂಕ: 28-12-2018 ರಂದು ಸದರಿ ಕಲಂ ಅಡಿಯಲ್ಲಿ ವಿನಾಯಿತಿ ಕೋರಿ Central Board of Direct Taxationಗೆ ಮನವಿ ಸಲ್ಲಿಸಲಾಗಿದೆ. ಈ ಬಗ್ಗೆ ಆದಾಯ ತೆರಿಗೆ ಇಲಾಖೆ ಜೊತೆ ಪತ್ರ ವ್ಯವಹಾರ ನಡೆಸಿದ್ದು, ಇನ್ನು ಪ್ರಕ್ರಿಯೆಯಲ್ಲಿರುತ್ತದೆ. |
| ಆ) | ಆದಾಯ ತೆರಿಗೆ ಇಲಾಖೆಯಿಂದ 413.08 ಕೋಟಿ ತೆರಿಗೆ ಬಾಕಿ ಬಗ್ಗೆ ನೋಟಿಸ್ ಬಂದ ಬಳಿಕ ಆದಾಯ ತೆರಿಗೆ ಕಾಯ್ದೆಯನ್ವಯ 30 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸದಿರಲು ಕಾರಣವೇನು ? | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸುಂಕ ನಿಧಿಯನ್ನು ವಾರ್ಷಿಕ ವರಮಾನ ಎಂದು ಪರಿಗಣಿಸಿ ಆದಾಯ ತೆರಿಗೆ ಇಲಾಖೆಯು ರೂ.413.08 ಕೋಟಿ ಮೊತ್ತವನ್ನು ಆದಾಯ ತೆರಿಗೆಯಾಗಿ ಕಟಾಯಿಸಿರುತ್ತದೆ. ಅದರನ್ವಯ ದಿನಾಂಕ: 05.02.2018ರ ನಂತರದಲ್ಲಿ ಮಂಡಳಿಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ಮಂಡಳಿಯು ದಿನಾಂಕ: 23-12-2017 ರಂದು ಸಲ್ಲಿಸಿದ್ದ ಫಾರ್ಮ 10ರ ವಿಚಾರಣೆಯನ್ನು ಆದಾಯ ತೆರಿಗೆ ಇಲಾಖೆಯವರು ದಿನಾಂಕ:23-02-2018 ರಂದು ವಿಚಾರಣೆ ನಡೆಸಿ ತಿರಸ್ಕರಿಸಿರುತ್ತಾರೆ.<br>• ದಿನಾಂಕ: 28-02-2018 ರಂದು ಆದಾಯ ತೆರಿಗೆ ಇಲಾಖೆಗೆ ಮಂಡಳಿಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದ ದಿನಾಂಕ: 31-07-2017 ರ ಸುತ್ತೋಲೆಯನ್ವಯ ಡಿಮಾಂಡ್ ನೋಟಿಸ್‌ಗೆ ಮೇಲ್ಮನವಿ ಸಲ್ಲಿಸುವ ಪೂರ್ವದಲ್ಲಿ ಶೇ.20 ರಷ್ಟು ಮೊತ್ತವನ್ನು ಪಾವತಿಸಲು ಸರ್ಕಾರದ ಅನುಮೋದನೆ ಕೋರಿದ್ದು, ಅನುಮೋದನೆ ಸಿಕ್ಕ ನಂತರ ಪಾವತಿಸಲಾಗುವುದು, ಇದಕ್ಕಾಗಿ 10 ದಿನಗಳ ಅವಕಾಶ ನೀಡುವಂತೆ ಪತ್ರದ ಮೂಲಕ ಕೋರಲಾಗಿರುತ್ತದೆ. |

| | | |
|---|---|---|
| | | • ದಿನಾಂಕ:28–02–2018 ರಂದೇ ಆನ್ ಲೈನ್‌ನಲ್ಲಿ ವಕೀಲರಾದ ಶ್ರೀ ಪಾರ್ಥಸಾರಥಿಯವರ ಮುಖಾಂತರ CIT(A)ಗೆ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಅದರನ್ವಯ ರೂ. 413.08 ಕೋಟಿ ಮತ್ತು ಶೇ.6 ರಷ್ಟು ಬಡ್ಡಿಯೊಂದಿಗೆ ಮಂಡಳಿಗೆ ಮರುಪಾವತಿಸಲು ಕೋರಲಾಗಿರುತ್ತದೆ.<br>• ಆದಾಗಿಯೂ, ಆದೇ ದಿನ ರೂ.413.08 ಗಳನ್ನು ಆದಾಯ ತೆರಿಗೆ ಇಲಾಖೆಯವರು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ.<br>• ದಿನಾಂಕ:12–07–2018 ರಿಂದ ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರು ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಿಗೆ ಪತ್ರ ಬರೆದು ಮಂಡಳಿಯ ಸುಂಕದ ಮೊತ್ತಕ್ಕೆ ಆದಾಯ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ, ಸೂಕ್ತ ಆದೇಶ ನೀಡುವಂತೆ ಕೋರಿರುತ್ತಾರೆ.<br>• ದಿನಾಂಕ:30–04–2018 ರಂದು ಮಂಡಳಿಯ ಕಾರ್ಯದರ್ಶಿಗಳು ಸರ್ಕಾರದ ಕಾರ್ಯದರ್ಶಿಗಳ ಸೂಚನೆಯ ಮೇರೆಗೆ ರಾಷ್ಟ್ರದ ಎಲ್ಲಾ ರಾಜ್ಯಗಳ ಮಂಡಳಿಗೆ ಪತ್ರ ಬರೆದು ಆದಾಯ ತೆರಿಗೆ ಇಲಾಖೆಯಿಂದ ಸುಂಕದ ಮೊತ್ತಕ್ಕೆ ಆದಾಯ ತೆರಿಗೆ ಕಡಿತ ಮಾಡಲಾಗಿದ್ದರೆ ಆದಾಯ ತೆರಿಗೆಗೆ ವಿನಾಯಿತಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ. ಅದರಂತೆ, ಪಂಜಾಬ್ ರಾಜ್ಯದ ಮಂಡಳಿಯು ಈಗಾಗಲೇ ಆದಾಯ ತೆರಿಗೆ ಇಲಾಖೆಗೆ ಮೊತ್ತ ಪಾವತಿಸಿ ಮೇಲ್ಮನವಿಯನ್ನು ಸಲ್ಲಿಕೆ ಮಾಡಿ ಅದರ ವಿಚಾರಣೆ ಮುಕ್ತಾಯವಾದ ನಂತರ ಮೂಲ ಮೊತ್ತ ಮತ್ತು ಬಡ್ಡಿಯೊಂದಿಗೆ ಆದಾಯ ತೆರಿಗೆ ಇಲಾಖೆಯು ವಾಪಸ್ಸು ಮಾಡಿರುವುದಾಗಿ ದಿನಾಂಕ: 28–07–2018ರ ಪತ್ರದಲ್ಲಿ ತಿಳಿಸಿರುತ್ತಾರೆ. ಇದರ ಆಧಾರದ ಮೇಲೆ ಮಂಡಳಿಯ ಕಾರ್ಯದರ್ಶಿಗಳು ದಿನಾಂಕ:28–08–2018ರಲ್ಲಿ ಆದಾಯ ತೆರಿಗೆ ಇಲಾಖೆಗೆ ಪಂಜಾಬ್ ಮಾದರಿಯಂತೆ, ಮಂಡಳಿಗೂ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.<br>ಆದಾಯ ತೆರಿಗೆಯ ಬಗ್ಗೆ ಪರಿಣಿತಿ ಹೊಂದಿರುವ ವಕೀಲರ ಮೂಲಕ ಸೂಕ್ತ ದಾಖಲೆಗಳೊಂದಿಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೊತ್ತವನ್ನು ವಾಪಸ್ಸು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಇ) | ತೆರಿಗೆ ಬಾಕಿ ಇದೆ ಎಂಬ ನೋಟಿಸ್ ಬಂದ 6 ತಿಂಗಳ ಬಳಿಕ ದಿನಾಂಕ 28-08-2018 ರಂದು ಆದಾಯ ತೆರಿಗೆ ಕಾಯ್ದೆ ಕಲಂ 10(46) ರ ಅಡಿಯಲ್ಲಿ ತೆರಿಗೆ ವಿನಾಯಿತಿ ಕೋರಿ ಮನವಿ ಸಲ್ಲಿಸಿರುವುದು ತೀವ್ರತರವಾದ ಕರ್ತವ್ಯ ನಿರ್ಲಕ್ಷ್ಯವಲ್ಲವೇ; ಈ ಕುರಿತು ಸರ್ಕಾರದ ನಿಲುವೇನು ; | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸುಂಕ ನಿಧಿಯನ್ನು ವಾರ್ಷಿಕ ವರಮಾನ ಎಂದು ಆದಾಯ ತೆರಿಗೆ ಇಲಾಖೆಯು ರೂ. 413.08 ಕೋಟಿ ಮೊತ್ತವನ್ನು ಆದಾಯ ತೆರಿಗೆಯಾಗಿ ಕಟಾಯಿಸಿರುತ್ತದೆ. ಆದರೆ ದಿನಾಂಕ: 05-02-2018ರ ನಂತರದಲ್ಲಿ ಮಂಡಳಿಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ಮಂಡಳಿಯು ದಿನಾಂಕ: 23-12-2017 ರಂದು ಸಲ್ಲಿಸಿದ್ದ ಫಾರ್ಮ 10ರ ವಿಚಾರಣೆಯನ್ನು ಆದಾಯ ತೆರಿಗೆ ಇಲಾಖೆಯವರು ದಿನಾಂಕ:23-02-2018 ರಂದು ವಿಚಾರಣೆ ನಡೆಸಿ ತಿರಸ್ಕರಿಸಿರುತ್ತಾರೆ.<br>• ದಿನಾಂಕ: 28-02-2018 ರಂದು ಆದಾಯ ತೆರಿಗೆ ಇಲಾಖೆಗೆ ಮಂಡಳಿಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದ ದಿನಾಂಕ: 31-07-2017ರ ಸುತ್ತೋಲೆಯನ್ವಯ ಡಿಮಾಂಡ್ ನೋಟಿಸ್‌ಗೆ ಮೇಲ್ಮನವಿ ಸಲ್ಲಿಸುವ ಪೂರ್ವದಲ್ಲಿ ಶೇ. 20 ರಷ್ಟು ಮೊತ್ತವನ್ನು ಪಾವತಿಸಲು ಸರ್ಕಾರದ ಅನುಮೋದನೆ ಕೋರಿದ್ದು, ಅನುಮೋದನೆ ಸಿಕ್ಕ ನಂತರ ಪಾವತಿಸಲಾಗುವುದು, ಇದಕ್ಕಾಗಿ 10 ದಿನಗಳ ಅವಕಾಶ ನೀಡುವಂತೆ ಪತ್ರದ ಮೂಲಕ ಕೋರಲಾಗಿರುತ್ತದೆ.<br>• ದಿನಾಂಕ:28-02-2018 ರಂದೇ ಆನ್ ಲೈನ್‌ನಲ್ಲಿ ವಕೀಲರಾದ ಶ್ರೀ ಪಾರ್ಥ ಸಾರಥಿಯವರ ಮುಖಾಂತರ CIT(A)ಗೆ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಅದರನ್ವಯ ರೂ. 413.08 ಕೋಟಿ ಮತ್ತು ಶೇ. 6ರಷ್ಟು ಬಡ್ಡಿಯೊಂದಿಗೆ ಮರುಪಾವತಿಸಲು ಕೋರಲಾಗಿರುತ್ತದೆ.<br>• ಆದಾಗಿಯೂ, ಆದೇ ದಿನ ರೂ. 413.08 ಗಳನ್ನು ಆದಾಯ ತೆರಿಗೆ ಇಲಾಖೆಯವರು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ.<br>• ದಿನಾಂಕ:12-07-2018 ರಿಂದ ಮಾನ್ಯ ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರು ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಿಗೆ ಪತ್ರ ಬರೆದು ಮಂಡಳಿಯ ಸುಂಕದ ಮೊತ್ತಕ್ಕೆ ಆದಾಯ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ, ಸೂಕ್ತ ಆದೇಶ ನೀಡುವಂತೆ ಕೋರಿರುತ್ತಾರೆ.<br>• ದಿನಾಂಕ: 30-04-2018 ರಂದು ಮಂಡಳಿಯ ಕಾರ್ಯದರ್ಶಿಗಳು ಸರ್ಕಾರದ ಕಾರ್ಯದರ್ಶಿಗಳ ಸೂಚನೆಯ ಮೇರೆಗೆ ರಾಷ್ಟ್ರದ ಎಲ್ಲಾ ರಾಜ್ಯಗಳ ಮಂಡಳಿಗೆ ಪತ್ರ ಬರೆದು ಆದಾಯ ತೆರಿಗೆ ಇಲಾಖೆಯಿಂದ ಸುಂಕದ ಮೊತ್ತಕ್ಕೆ ಆದಾಯ ತೆರಿಗೆ ಕಡಿತ ಮಾಡಲಾಗಿದ್ದರೆ ಆದಾಯ ತೆರಿಗೆಗೆ ವಿನಾಯಿತಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ. ಅದರಂತೆ, ಪಂಜಾಬ್ ರಾಜ್ಯದ ಮಂಡಳಿಯು |

| | | |
|---|---|---|
| | | ಈಗಾಗಲೇ ಆದಾಯ ತೆರಿಗೆ ಇಲಾಖೆಗೆ ಮೊತ್ತ ಪಾವತಿಸಿ ಮೇಲ್ಮನವಿಯನ್ನು ಸಲ್ಲಿಕೆ ಮಾಡಿ ಅದರ ವಿಚಾರಣೆ ಮುಕ್ತಾಯವಾದ ನಂತರ ಮೂಲ ಮೊತ್ತ ಮತ್ತು ಬಡ್ಡಿಯೊಂದಿಗೆ ಆದಾಯ ತೆರಿಗೆ ಇಲಾಖೆಯು ವಾಪಸ್ಸು ಮಾಡಿರುವುದಾಗಿ ದಿನಾಂಕ:28-07-2018ರ ಪತ್ರದಲ್ಲಿ ತಿಳಿಸಿರುತ್ತಾರೆ. ಇದರ ಆಧಾರದ ಮೇಲೆ ಮಂಡಳಿಯ ಕಾರ್ಯದರ್ಶಿಗಳು ದಿನಾಂಕ:28-08-2018ರಲ್ಲಿ ಆದಾಯ ತೆರಿಗೆ ಇಲಾಖೆಗೆ ಪಂಜಾಬ್ ಮಾದರಿಯಂತೆ, ಮಂಡಳಿಗೂ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.<br><br>ಆದಾಯ ತೆರಿಗೆಯ ಬಗ್ಗೆ ಪರಿಣಿತಿ ಹೊಂದಿರುವ ವಕೀಲರ ಮೂಲಕ ಸೂಕ್ತ ದಾಖಲೆಗಳೊಂದಿಗೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೊತ್ತವನ್ನು ವಾಪಸ್ಸು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಕರಣವು ಪ್ರಗತಿಯಲ್ಲಿರುತ್ತದೆ. |
| ಈ) | ತೆರಿಗೆ ಬಾಕಿ ಬಗ್ಗೆ ನೋಟೀಸ್ ಬಂದ 6 ತಿಂಗಳವರೆಗೂ ಸದರಿ ನೋಟಿಸಿನ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಸರ್ಕಾರದ ಗಮನಕ್ಕೂ ತಾರದೆ ನೋಟೀಸನ್ನು ಮುಚ್ಚಿಟ್ಟು ಮಂಡಳಿಗೆ ಆರ್ಥಿಕ ನಷ್ಟ ಮಾಡಲು ಯತ್ನಿಸಿ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳನ್ನು ಅಮಾನತ್ತು ಮಾಡದಿರಲು ಕಾರಣವೇನು ? | ಆದಾಯ ತೆರಿಗೆ ಇಲಾಖೆಯಿಂದ ದಿನಾಂಕ: 29.12.2017 ರಂದು ರೂ.413.08 ಕೋಟಿ ತೆರಿಗೆ ಪಾವತಿಸುವಂತೆ ತಗಾದೇ ನೋಟಿಸ್ ಬಂದಿರುತ್ತದೆ. ಈ ಸಂಬಂಧ ಮಂಡಳಿಯ ಚಾರ್ಟರ್ಡ್ ಅಕೌಂಟೆಂಟ್ ಮತ್ತು ಸರ್ಕಾರದ ಗಮನಕ್ಕೆ ತರಲಾಗಿದೆ. ಸರ್ಕಾರದ ಕಾರ್ಯದರ್ಶಿಯವರ ನಿರ್ದೇಶನದಂತೆ ಇತರೆ ರಾಜ್ಯಗಳಲ್ಲಿ ಈ ರೀತಿ ತೆರಿಗೆ ಪಾವತಿಸಲಾಗುತ್ತಿದೆಯೇ ಎಂಬ ಮಾಹಿತಿ ಪಡೆಯುವಲ್ಲಿ ವಿಳಂಭವಾಗಿರುತ್ತದೆ. ಹಾಗೂ ಸರ್ಕಾರದ ಅನುಮತಿ ಪಡೆದು ಆದಾಯ ತೆರಿಗೆಯಲ್ಲಿ ನುರಿತ ವಕೀಲರನ್ನು ನೇಮಿಸಿಕೊಂಡು ಶೇ.20 ರಷ್ಟು ತೆರಿಗೆ ಪಾವತಿಸಿ ಮೇಲ್ಮನವಿ ಸಲ್ಲಿಸುವ ಮೊದಲೇ ಆದಾಯ ತೆರಿಗೆ ಇಲಾಖೆಯವರು ಪೂರ್ಣ ತೆರಿಗೆ ಮೊತ್ತವನ್ನು ಬ್ಯಾಂಕ್ ಖಾತೆಯಿಂದ ದಿನಾಂಕ 28/02/2018 ರಂದು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ.<br>ಮುಂದುವರೆದು ಮಂಡಳಿಯ ಅಧಿಕಾರಿಗಳಿಂದ ಕರ್ತವ್ಯದಲ್ಲಿ ಯಾವುದೇ ತರವಾದ ನಿರ್ಲಕ್ಷ್ಯವಹಿಸಿರುವುದು ಕಂಡು ಬಂದಿರುವುದಿಲ್ಲ. |

ಕಾಇ 394 ಎಲ್‌ಇಟಿ 2020

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

Scanned with CamScan